ಶ್ರಿ ಜೆ. ಹೆಚ್. ಪಟೇಲ್.—ವಿದ್ಯುಚ್ಛಕ್ತಿ ಸಚಿವರು ಮತ್ತು ಅಬಕಾರಿ ಮಂತ್ರಿಗಳು

ಅ) ನೆರೆ ರಾಜ್ಯಗಳಿಂದ ವಿದ್ಯುತ್ ಆಮದಿಗೆ ರಾಜ್ಯ ಸರ್ಕಾರ ಪ್ರಯತ್ನಿಸಿತು ಹಾಗೂ ಸಾಧ್ಯವಿದ್ದಷ್ಟನ್ನು ಪಡೆದುಕೊಂಡಿತು ರಾಜ್ಯದೊಳಗಿನ ಹೆಚ್. ಟಿ ಗಾ ಹಕರ ಮೇಲೆ ಹಂತ ಹಂತವಾಗಿ ವಿದ್ಯುತ್ ಕಡಿತವನ್ನು ವಿಧಿಸಲಾಯಿತು. ಹಗಲಿನಲ್ಲಿ ಪಟ್ಟಣಗಳಲ್ಲಿ 3 ಗಂಟೆಗಳ ಕಾಲ ಹಳ್ಳಿಗಳಲ್ಲಿ 6 ಗಂಟೆಗಳಕಾಲ ಕ್ರಮವ್ಯಾಪ್ತಿ ಮತ್ತು ಮುನ್ಸೂಚನೆ ಸಹಿತವಾಗಿ (ಲೋಡ್‌ಷೆಡ್ಡಿಂಗ್) ಸಿರ್ ವಿದ್ಯುದ್ವೀಕರಣ ಮಾಡಲಾಯ್ತು. ಅಷ್ಟಾದರೂ ಬೇರೆ ಉಪಾಯ ಇಲ್ಲದಾಗ ಇಡೀ ಲೈನ್‌ಗಳನ್ನೇ ಸಿರ್ ವಿದ್ಯುದ್ವೀಕರಣ (De-energised) ಮಾಡಬೇಕಾಯಿತು.

(ಆ) ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸೂಪಾಡ್ಯಾಂ ಅನ್ನು 1985 ರಲ್ಲಿ ಪೂರ್ಣಗೊಳಿಸಲಾಗುವುದು. ಕಾಳಿಯ 5 ಮತ್ತು 6 ನೇ ಯೂನಿಟ್‌ಗಳು ಡಿಸೆಂಬರ್ 83 ರಲ್ಲಿ ಕಾರ್ಯಾರಂಭವಾಗುವುವು ರಾಯಚೂರು ಥರ್ಮಲ್‌ಸ್ಟೇಷನ್‌ನ ಒಂದನೇ ಹಂತ ಆಗಸ್ಟ್ 84 ರಲ್ಲಿ ಪೂರ್ಣಗೊಳ್ಳುವುದು. ಇದರ ಎರಡನೇ ಹಂತಕ್ಕೆ ಬೇಕಾಗಿರುವ ಕಲ್ಲಿದ್ದಲಿನ ಪೂರೈಕೆಗಾಗಿ ಭಾರತ ಸರ್ಕಾರದ ಒಪ್ಪಿಗೆ ಕೇಳಲಾಗಿದೆ. ವಾರಾಹಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ನುಂಡಿನ ಯೋಜನೆ ಅವಧಿಯಲ್ಲಿ ಅಂದರೆ 86 ರ ಜೂನ್ ನಲ್ಲಿ ಪೂರ್ಣಗೊಳ್ಳುವುದು. ಇದಲ್ಲದೆ ಕಾಳಿನದಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ಎರಡನೇ ಹಂತವನ್ನು ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗಿದೆ ಕರ್ನಾಟಕ ವಿದ್ಯುತ್ ನಿಗಮವು ಮಿನಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳಾದ ಘಟಪ್ರಭಾ, ಶಿವಪುರ ಕೆನಾಲ್ ಡ್ರಾಪ್ ಮತ್ತು ಪಿಶ್ವೇಶ್ವರಯ್ಯ ಕಾಲುವೆಯ ಮದ್ದೂರು ಶಾಖೆಯಲ್ಲಿ ಸ್ಥಾಪಿಸಲು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಇದಲ್ಲದೆ ಕರ್ನಾಟಕ ವಿದ್ಯುತ್ ನಿಗಮವು ಬೇರೆ 25 ಪ್ರಾಜೆಕ್ಟ್ ಸ್ವರೂಪವನ್ನು ತಯಾರಿಸಿದೆ. ಈ ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಿದ್ದೇ ಆದರೆ ವಿದ್ಯುತ್ ಕೊರತೆಯನ್ನು ಶಾಶ್ವತವಾಗಿ ತಪ್ಪಿಸಬಹುದು

(ಇ) ಆಂಧ್ರಪ್ರದೇಶದಲ್ಲಿ ವಿದ್ಯುತ್ ದೊರಕುವ ಸ್ಥಿತಿಯು ಉತ್ತಮಗೊಂಡರೆ ಮಾತ್ರ ಆ ರಾಜ್ಯದಿಂದ ವಿದ್ಯುತ್ ಆಮದಿಗೆ ಕರ್ನಾಟಕ ಸರ್ಕಾರಕ್ಕೆ ಆಶ್ವಾಸನೆ ದೊರೆತಿದೆ ಒಪ್ಪಂದವೇನೂ ಆಗಿಲ್ಲ.

ಕೇರಳ ರಾಜ್ಯದಿಂದ ವಿದ್ಯುತ್‌ಚ್ಛಕ್ತಿ ಪಡೆಯುವ ಬಗ್ಗೆ

29 ಶ್ರೀ ಪಿ. ರಾಮುದೇವ್ (ಮುಲ್ಕೀಶ್ವರ) ಅಬ್ಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೇರಳ ರಾಜ್ಯದಿಂದ ವಿದ್ಯುಚ್ಛಕ್ತಿ ಪಡೆಯಲು ರಾಜ್ಯ ಸರ್ಕಾರದವರು ಮಾಡಿಕೊಂಡು ಒಪ್ಪಂದದ ವಿವರಗಳೇನು ?

ಆ) ಈ ಒಪ್ಪಂದದಂತೆ ರಾಜ್ಯಕ್ಕೆ ಕೇರಳ ಸರ್ಕಾರದ ವಿದ್ಯುಚ್ಛಕ್ತಿ ಸರಬರಾಜು ಮಾಡದಿರುವುದರಿಂದ ರಾಜ್ಯಕ್ಕೆ ಉಂಟಾದ ತೊಂದರೆಗಳೇನು ?

ಇ) ಒಪ್ಪಂದ ಉಲ್ಲಂಘನೆಯ ಬಗ್ಗೆ ರಾಜ್ಯ ಸರ್ಕಾರ ಯಾವುದಾದರೂ ಕ್ರಮ ಕೈಗೊಳ್ಳುತ್ತಿದೆಯೇ ?

ಶ್ರೀ ಜಿ. ಹೆಚ್. ಪಟೇಲ್ ಅಬ್ಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು. —

ಅ) 1982-83ರಲ್ಲಿ ಯಾವ ಒಪ್ಪಂದವನ್ನು ಕೇರಳ ಸರ್ಕಾರದೊಂದಿಗೆ ವಿದ್ಯುಚ್ಛಕ್ತಿ ಆಮದಿಗೆ ರಾಜ್ಯ ಸರ್ಕಾರ ಮಾಡಿಕೊಂಡಿಲ್ಲ.

ಆ) ಪ್ರಶ್ನೆ (ಅ) ಗೆ ಕೊಟ್ಟಿರುವ ಉತ್ತರದ ದೃಷ್ಟಿಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ (ಅ) ಗೆ ಕೊಟ್ಟಿರುವ ಉತ್ತರದ ದೃಷ್ಟಿಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಟಿ. ನರಸೀಪುರ ಇದರ ಬಗ್ಗೆ

30 ಶ್ರೀ. ಟಿ. ಬೊರಯ್ಯ (ಬನ್ನೂರು).—ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಟಿ. ನರಸೀಪುರ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಟಿ. ನರಸೀಪುರ ಇದರಲ್ಲಿ 'ಎ' ವ್ಯವಸಾಯಗಾರರ ಸಂಘಗಳ ಸದಸ್ಯರ ಸಂಖ್ಯೆಗಳನ್ನು ತಿಳಿಸುವುದು.

ಆ) ವ್ಯವಸಾಯಗಾರರಲ್ಲದ ಸಂಘಗಳ ಸದಸ್ಯರ ಸಂಖ್ಯೆ ಎಷ್ಟು, ವಿವರ ತಿಳಿಸುವುದು.